ಸಿ. ಸಿ .ನಂ.**250/2010**

**ಸಿಡಬ್ಲ್ಯು – 1**

**ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,**

**ಧಾರವಾಡ**

**ಸಿ. ಸಿ .ನಂ.250/2010**

ಸಾಕ್ಷಿಯ ಹೆಸರು : ರಾಜೇಂದ್ರ

ತಂದೆಯ ಹೆಸರು : ಮೋಹನರಾವ್ ಧಾರವಾಡಕರ್

ವಯಸ್ಸು : 55 ವರ್ಷ

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಧಾರವಾಡ

## (**Evidence before charge**)

ದಿನಾಂಕ **24-01-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು**.**

**ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರವರಿಂದ.**

1. ಓ ಎಸ್ 490/1996 ನ್ನು ಇದೇ ನ್ಯಾಯಾಲಯದಲ್ಲಿ ನಾನು ಮತ್ತು ಇತರ ವಾದಿಗಳು ಸಲ್ಲಿಸಿದ್ದೇವೆ. ಸದರಿ ದಾವೆಯನ್ನು ನಿರ್ಬಂಧಕಾಜ್ಞೆಗಾಗಿ ಹಾಕಿರುತ್ತೇವೆ. ಸದರಿ ದಾವೆಗೆ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುತ್ತದೆ. ದಾವಾ ಆಸ್ತಿ ಸಿ ಟಿ ಸಿ ನಂ.82/1A/1A/1 ಇರುತ್ತದೆ. ಅದು 1 ಎಕರೆ 25 ಗುಂಟೆ 2.8/9 Sq. Yards ಇರುತ್ತದೆ. ಸದರಿ ಆಸ್ತಿಯು ಸಪ್ತಾಪುರದಲ್ಲಿ ಇರುತ್ತದೆ. ಆ ದಾವೆಯನ್ನು ರಿಜಿಸ್ಟಾರ್ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರ ವಿರುದ್ಧ ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ಒಂದನೇ ಅರ್ಜಿ ಸಂಖ್ಯೆಗೆ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ ದಾವಾ ಆಸ್ತಿಯು ಸರ್ವೇ ನಂ.2 ಬಿ

ದಲ್ಲಿ ಬರುತ್ತದೆ ಎಂದು ನಮೂದು ಮಾಡಿರುತ್ತಾರೆ. ಸದರಿ ದಾವೆಯಲ್ಲಿ ಕೆಲವೊಂದು ಖೊಟ್ಟಿ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

2. 1972 ರಲ್ಲಿ ಸರ್ವೇ ನಂ.2 ಬಿ ಗೆಜೆಟ್ ನೋಟಿಫಿಕೇಶನ್ ಆಗಿರುತ್ತದೆ. ಅವರು ಖೊಟ್ಟಿ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ. ಸದರಿ ಅಸಲು ದಾವೆಯಲ್ಲಿ ಪ್ರತಿವಾದಿಯರು ನಿಡಿ.6 ರಿಂದ ನಿಡಿ.8 ಮತ್ತು ನಿಡಿ.78 ಖೊಟ್ಟಿ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ. ಸದರಿ ದಾಖಲೆಗಳಲ್ಲಿ ಸರ್ವೇ ನಂ.2 ಬಿ ಎಂದು ತಪ್ಪಾಗಿ ಬರೆದಿರುತ್ತಾರೆ. ಪ್ರತಿವಾದಿಗಳು ಪ್ಲಾನ್ ನ್ನು ಚೇಂಜ್ ಮಾಡಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಭೂ ಸ್ವಾದೀನ ಆದ ಸರ್ವೇ ನಂ.2 ಬಿ ಆಸ್ತಿಯು ಸರ್ವೇ ನಂ.3 ಬಿ ಆಸ್ತಿಯ ಭಾಗ ಎಂದು ಖೊಟ್ಟಿಯಾಗಿ ನಮೂದು ಮಾಡಿರುತ್ತಾರೆ. ಸದರಿ ತಕರಾರನ್ನು ಎ. ಇ. ಪುನೀತ್(11 ನೇ ಆರೋಪಿ) ಎನ್ನುವವರು ಸಲ್ಲಿಸಿರುತ್ತಾರೆ.

3. ಆರೋಪಿ ನಂ.1 ರಿಂದ 5 ರವರು ಮತ್ತು ಆರೋಪಿ ನಂ.12 ರವರ ಆದೇಶದ ಮೇರೆಗೆ ಆರೋಪಿ ನಂ.14 ರವರು ಖೊಟ್ಟಿ ದಾಖಲೆಗಳನ್ನು ತಯಾರಿಸಿದರು. ಅರ್ಜಿ ಸಂಖ್ಯೆ 1 ಕ್ಕೆ ಸಲ್ಲಿಸಿದ ತಕರಾರಿನ ಜೊತೆಗೆ ಒಂದು ಖಾಸಗಿಯವರು ತಯಾರಿಸಿದ ನಕ್ಷೆಯನ್ನು ತಯಾರಿಸಿದರು. ಸದರಿ ನಕ್ಷೆಯಲ್ಲಿ ಬಾಟನಿ ವಿಭಾಗದ ಕಟ್ಟಡದ ದಕ್ಷಿಣ ಭಾಗಕ್ಕೆ ಸರ್ವೇ ನಂ.2 ಬಿ ಬರುತ್ತದೆ ಎಂದು ತೋರಿಸಿರುತ್ತಾರೆ. ಸದರಿ ನಕ್ಷೆಗೆ ಆರೋಪಿ ನಂ.2, 6 ರಿಂದ 9 ರವರು ಸಹಿಯನ್ನು ಮಾಡಿರುತ್ತಾರೆ. ಲದ್ವಾ, ರಾಜಶೇಖರ ನಡಕಟ್ಟಿ, ಅಕ್ಕಣ್ಣವರ್ ಅವರು ಸಾಕ್ಷಿಯನ್ನು ಆ ದಾವೆಯಲ್ಲಿ ಕೊಟ್ಟಿರುತ್ತಾರೆ. ಸದರಿ ನಕ್ಷೆಯು ಖೊಟ್ಟಿ ಮತ್ತು ಮೋಸದಿಂದ ಮಾಡಿದ ಬಗ್ಗೆ ಸದರಿ ಆರೋಪಿತನಿಗೆ ಗೊತ್ತಿತ್ತು. ಈ ಎಲ್ಲ ಆರೋಪಿತರು ಖೊಟ್ಟಿ ದಾಖಲೆಗಳನ್ನು ಕೊಡುವಾಗ ಸರ್ಕಾರಿ ನೌಕರರು ಆಗಿದ್ದರು. ಅಕ್ಕಣ್ಣವರ್ ರವರು ಸರ್ವೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು.

4. ಆರೋಪಿ ನಂ.13 ರವರು 12 ನೇ ಆರೋಪಿತನಿಗೆ ಒಂದು ಪತ್ರವನ್ನು ಬರೆದರು. ಸದರಿ ಖೊಟ್ಟಿ ದಾಖಲೆಗಳು ಸಿ ಟಿ ಸರ್ವೇ ಇಲಾಖೆಯಲ್ಲಿ ಸಿಗುತ್ತವೆ ಎಂದು ಪತ್ರ ಬರೆದರು. ಆರೋಪಿ ನಂ.13 ರವರಿಗೆ ಖೊಟ್ಟಿ ದಾಖಲೆಗಳು ಇವೆ ಎಂದು ಗೊತ್ತಿದ್ದರೂ ಸಹ ಆರೋಪಿ ನಂ.12 ರವರಿಗೆ ಪತ್ರವನ್ನು ಬರೆದಿರುತ್ತಾರೆ. ಆರೋಪಿ ನಂ.4 ರವರು ಸಿಟಿ ಸರ್ವೇ ಇಲಾಖೆಯಲ್ಲಿ ದೃಢೀಕೃತ ದಾಖಲೆಗೆ ಅರ್ಜಿಯನ್ನು ಸಲ್ಲಿಸಿದ್ದರು. ಆರೋಪಿ ನಂ.4 ರವರು ಸಿಟಿ ಸರ್ವೇ ಇಲಾಖೆಯಿಂದ ದೃಢೀಕೃತ ದಾಖಲೆಗಳನ್ನು ತೆಗೆದುಕೊಂಡು ಬಂದರು. ಆರೋಪಿ ನಂ.13 ಮತ್ತು 12 ರವರಿಗೆ ಖೊಟ್ಟಿ ದಾಖಲೆಗಳು ಇವೆ ಎಂದು ಗೊತ್ತಿತ್ತು. ಸದರಿ ದಾಖಲೆಗಳು ನಿಡಿ.81 ರಿಂದ 86 ದಾಖಲೆಗಳು ಸದರಿ ದಾವೆಯಲ್ಲಿ ಇರುತ್ತವೆ. ನಿಡಿ.81 ಅವಾರ್ಡ ಕಾಪಿ ಇರುತ್ತದೆ. ನಿಡಿ.82 ಮತ್ತು ನಿಡಿ.83 ಕಬ್ಜಾ ಪಾವತಿ ದಾಖಲೆಗಳು ಇರುತ್ತವೆ. ನಿಡಿ.84 ಪಂಚಯಾದಸ್ತ ದಾಖಲೆ ಇರುತ್ತದೆ. ನಿಡಿ.85 joint measurement statement ಹಾಗೂ ನಿಡಿ.86 ಪೀಟೀ ಶೀಟ್ ದಾಖಲೆಗಳು ಇರುತ್ತದೆ. ಸದರಿ ದಾಖಲೆಗಳನ್ನು ಆರೋಪಿ ನಂ.12 ರವರು ಅರ್ಜಿ ಸಂಖ್ಯೆ 26 ಅಡಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಿಡಿ.81 ದಾಖಲೆಯನ್ನು ಅದೇ ದಿನ ತೆಗೆದುಕೊಳ್ಳಲು ಅರ್ಜಿ ಸಲ್ಲಿಸಿ ಪ್ರಾಂತ ಆಫೀಸರ್ ರವರ ಸಹಿಯನ್ನು ಖೊಟ್ಟಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತಾರೆ.

5. ನ್ಯಾಯಾಲಯವು ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ತೆಗೆದುಕೊಂಡು ಬರಲು ಆರೋಪಿ ನಂ.16 ರವರಿಗೆ ಆದೇಶ ಮಾಡಿದರು. ಆರೋಪಿ ನಂ.16 ರವರ ಪರವಾಗಿ ಅರೋಪಿ ನಂ.15 ರವರು ಸದರಿ ದಾಖಲೆಗಳನ್ನು ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ. ನಾನು ಸಹ ಸದರಿ ದಾಖಲೆಗಳು ಪಡೆದುಕೊಳ್ಳಲು ಅರ್ಜಿಯನ್ನು ಕೊಟ್ಟಿದ್ದೆ. ಸದರಿ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ ಎಂದು ಹೇಳಿ 15 ನೇ ಆರೋಪಿ ಹಿಂಬರಹ ಕೊಟ್ಟಿರುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಖೊಟ್ಟಿ ದಾಖಲೆಗಳ ದೃಢೀಕೃತ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೇನೆ.

6. ನಮ್ಮ ದಾವಾ ಆಸ್ತಿಯನ್ನು ಎತ್ತಿ ಹಾಕಲಿಕ್ಕೆ ಖೊಟ್ಟಿ ದಾಖಲೆಗಳನ್ನು ತಯಾರಿಸಿರುತ್ತಾರೆ. ಸದರಿ ಆರೋಪಿತರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಕೋರಿಕೊಳ್ಳುತ್ತೇನೆ.

**ಸದರಿ ದಾಖಲೆಗಳನ್ನು ಗುರುತಿಸುವಿಕೆಗಾಗಿ ಮುಂದುವರೆದ ಸಾಕ್ಷಿಗೆ ಸಮಯನ್ನು ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಸಿಡಬ್ಲ್ಯು – 1**